ವೀರಾಜಪೇಟೆ ಮತ ಕ್ಷೇತ್ರಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ

605 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕು ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನವನ್ನು ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆಯೇ.

ಆ) ಹಾಗಿದ್ದಲ್ಲಿ, ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಮೈಸೂರು-ಹುಣಸೂರು-ಪಿರಿಯಾಪಟ್ಟಣ ರಸ್ತೆ ಮತ್ತು ಮೈಸೂರು - ಹುಣಸೂರು - ವೀರಾಜಪೇಟೆ ಕೇರಳ ರಸ್ತೆಯಲ್ಲಿ ತೀವ್ರ ವಾಹನ ಸಂಚಾರದ ಒತ್ತಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿರುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ರಸ್ತೆ ಅಭಿವೃದ್ಧಿ ಕಾರ್ಯಕ್ರಮದಲ್ಲಿ 10 ಲಕ್ಷ ರೂ.ಗಳಿಗೆ ಹಾಗೂ ಗಿರಿ ಪ್ರದೇಶ ಅಭಿವೃದ್ಧಿ ಯೋಜನೆ ಅಡಿ 53.00 ಲಕ್ಷ ರೂ.ಗಳ ಕಾರ್ಯಕ್ರಮಕ್ಕಾಗಿ 93-94ನೇ ಸಾಲಿನಲ್ಲಿ ವಿಶೇಷ ಅನುದಾನ ನೀಡಲಾಗಿದೆ.

ಆ) ಕಾಮಗಾರಿಗಳ ಅಂದಾಜಿಗೆ ಮಂಜೂರಾತಿ ನೀಡಿದ್ದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿ ನಡೆದಂತೆ ಬೇಡಿಕೆ ಅನುಸರಿಸಿ ಹಣ ಭರವಸೆ ಪತ್ರವನ್ನು ನೀಡಬೇಕಿರುತ್ತವೆ. ಕೊಡಗು ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಒಟ್ಟು 159.74 ಲಕ್ಷ ರೂ.ಗಳನ್ನು ಫೆಬ್ರವರಿ 94ರವರೆಗೆ ಬಿಡುಗಡೆ ಆಗಿದೆ.

ಇ) ಇವು ರಾಜ್ಯ ಹೆದ್ದಾರಿಗಳಾಗಿದ್ದು, ತೀವ್ರವಾದ ವಾಹನ ಸಂಚಾರದ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಈ ರಸ್ತೆಗಳನ್ನು ವಾಹನ ಸಂಚಾರಕ್ಕೆ ಅಡೆತಡೆ ಇರದಂತೆ ಆಗಿಂದ್ದಾಗೆ ಬಿದ್ದಿರುವ ಗುಂಡಿಗಳನ್ನು ಮುಚ್ಚಿ ಡಾಂಬರು ಮಾಡಿ, ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ. ಹಾಗೂ ಮೈಸೂರು-ವಿರಾಜಪೇಟೆ-ಕೇರಳ ರಸ್ತೆ (ಮಾಕುಟ ರಸ್ತೆಯ ಆಯ್ದ ಭಾಗಗಳ ಡಾಂಬರೀಕರಣಕ್ಕೆ 93-94ನೇ ಸಾಲಿನಲ್ಲಿ 15.00 ಲಕ್ಷ ರೂ. ಅಂದಾಜಿನ ಕಾಮಗಾರಿಗೆ ಗುತ್ತಿಗೆ ಮಂಜೂರಾಗಿದೆ. ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಕಾರಂಜಾ, ಚುಳಕಿ ನಾಲಾ ಹಾಗೂ ಅಪ್ಪರ್ ಮುಲ್ಲಾಮಾರಿ ಯೋಜನೆಗಳನ್ನು ಕುರಿತು

700 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ, ಚುಳಕಿ ನಾಲಾ ಹಾಗೂ ಅಪ್ಪರ್ ಮುಲ್ಲಾಮಾರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇಲ್ಲಿಯವರೆಗೆ ಆ ಯೋಜನೆಗಳಿಗೆ ಖರ್ಚು ಮಾಡಿದ ಹಣವೆಷ್ಟು;

ಇ) ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಬೇಕಾಗಿತ್ತು;

ಈ) ಆ ಯೋಜನೆಗಳಿಗೆ 1994-95 ರಲ್ಲಿ ಖರ್ಚು ಮಾಡಿದ ಹಣವೆಷ್ಟು;